ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಗೋಪಾಲಗೌಡ.—ನಿಮ್ಮ ತರಗತಿಯ ಪರಿಗೆ ಪ್ರಾಶಸ್ತ್ಯವನ್ನು ತೋರಿಸಬೇಕೆಂಬ ವಿಷಯದಲ್ಲಿ ಸರ್ಕಾರಿ ಹುಕುಂ ಇದೆ ಎಂದು ಉತ್ತರ ಕೊಟ್ಟಿದ್ದೀರಿ. ಈ ಅರ್ಜಿಗಳನ್ನು ಹಾಕುವಾಗ ಅದರಲ್ಲಿ ಜಾತಿಯನ್ನು ನಮೂದಿಸುವುದಿಲ್ಲ ಎಂದು ತಾವು ಉತ್ತರ ಕೊಟ್ಟಿರಿ. ಹಾಗಾದರೆ ಹರಿಜನರ ಅರ್ಜಿ ಎಂದು ಹೇಳಲು ಹೇಗೆ ಗೊತ್ತಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಈ ಅರ್ಜಿಗಳಲ್ಲಿ ನಮೂದಾಗಿಲ್ಲ ಎಂದು ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಅದನ್ನು ಹೇಗೆ ಗೊತ್ತುಮಾಡುತ್ತೀರಿ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಥಳೀಯ ಅಧಿಕಾರಿಗಳು ಅದನ್ನೆಲ್ಲಾ ತಿಳಿದುಕೊಳ್ಳುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅರ್ಜಿ ಬರೆದು ಕೊಡುವಾಗಲೇ ಅದನ್ನೆಲ್ಲಾ ಬರೆದುಕೊಡುತ್ತಾರಲ್ಲವೇ, ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಸಂದರ್ಭಗಳಲ್ಲಿ ಹಾಗೆ ಬರೆಯುತ್ತಾರೆ.

Disposal of Date-groves in areas under Prohibition.

Q.—233. **Sri T. HANUMAIAH** (Hiriyur—Scheduled Castes).—

Will the Government be pleased to state:—

(*a*) whether there is any Government Order to the effect that while disposing of the date grove in the five districts brought under prohibition, preference should be shown to the depressed classess; if so, the number and date of the Government Order;

(*b*) the number of applications of the Depressed Classes filed in the five districts (districtwar and talukwar); the total number of grants to Depressed Classes and Other Caste Hindus and by public auction;

(*c*) the extent of the date grove lands granted to each of the individual applicants from the Depressed Classes;

(*d*) whether it will not be practicable to refer such applications to the Depressed Class members represented on each of the Taluk and District Committees?

A.—**Sri Kadidal MANJAPPA** (Minister for Revenue and Public Works).—

(*a*) Yes, *vide* G.O. No. R. 10445-9—L.R. 258-50-11, dated 15th January 1951, G.O. No. R. 13715-25—L.R. 384-47-4, dated 13th January 1953.

(*b*) As the period for which the information is required is not furnished, no information can be given.

(*c*) Does not arise in view of answer to (*b*).

(*d*) Not necessary in view of the Government Order dated 13th January 1953 reserving 20 per cent of the released date groves to Depressed Classes referred to in (*a*).

ಶ್ರೀ ಟಿ. ಹನುಮಯ್ಯ.—(ಎ) ಪ್ರಶ್ನೆಗೆ ಉತ್ತರವಾಗಿ ತಿಳಿಸಿರುವುದರಲ್ಲಿ 15-1-1951ನೇ ಆರ್ಡರಿನಲ್ಲಿ ಎಷ್ಟು ಪರ್ಸೆಂಟೇಜು ಫಿಕ್ಸ್ ಮಾಡಿದ್ದೀರಿ, ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—20 ಪರ್ಸೆಂಟು.

ಶ್ರೀ ಟಿ. ಹನುಮಯ್ಯ.—ತಾವುಹೇಳುವುದು 1953ನೇ ಗವರ್ನಮೆಂಟ್ ಆರ್ಡರ್ ಪ್ರಕಾರ 20 ಪರ್ಸೆಂಟ್ ಆಯಿತು. 15-1-1951ರಲ್ಲಿ ಎಷ್ಟು ಪರ್ಸೆಂಟ್ ಫಿಕ್ಸ್ ಆಗಿದೆ ಎಂದು ನನ್ನ ಪ್ರಶ್ನೆ.

ಶ್ರೀ ಕಡಿದಾಳ್ ಮಂಜಪ್ಪ.—ಪರ್ಸೆಂಟ್ ಇಲ್ಲ. Preference may be given to Depressed Classes ಎಂದಿದೆ.

ಶ್ರೀ ಟಿ. ಹನುಮಯ್ಯ.—ಪಾನನಿರೋಧ ಜಾರಿಗೆ ಬಂದಿರತಕ್ಕ ಡಿಸ್ಟ್ರಿಕ್ಟ್‌ಗಳಲ್ಲಿ ಎಲ್ಲಾ ಕಡೆಯಲ್ಲೂ ಜಮೀನು ಆಬಾದು ಮಾಡಲಿಕ್ಕೆ ಸರ್ಕಾರದವರು ಆರ್ಡರ್ ಮಾಡಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಕಡೆಯೂ ಆಾಡುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮಾತ್ರ ಕೊಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಕೆಲವು ಕಡೆ ಏಕೆ ಸ್ವಾಮಿ ಜಮೀನು ಆಬಾದು ಮಾಡಲಿಕ್ಕೆ ಆರ್ಡರ್ ಕೊಟ್ಟಿಲ್ಲ? ಕೆಲವ ತಾಲ್ಲೂಕುಗಳಲ್ಲಿ ಜಮೀನಿಗೆ ದರಖಾಸ್ತು ಬಂದರೂ ಕೂಡ ಅದನ್ನು ಹಾಗೆಯೇ ರಿಸರ್ವ್ ಮಾಡಲಿಕ್ಕೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಡೇಟ್ ಗ್ರೋವ್ ಸಮಿತಿ ಎಂದು ನೇಮಕವಾಗಿತ್ತು. ಅವರು ಶಿಫಾರಸು ಮಾಡಿ ಕೆಲವು ಡೇಟ್ ಗ್ರೂವ್ಸ್‌ನ್ನು ರಿಲೀಸ್ ಮಾಡಕೂಡದು ಹಾಗೆಯೇ ರಿಜರ್ವ್ ಮಾಡಿರಬೇಕೆಂದು ಅಭಿಪ್ರಾಯಪಟ್ಟರು. ಅದರಮೇಲೆ ಅವನ್ನು ಸರ್ಕಾರದವರ ರಿಜರ್ವ್ ಆಗಿ ಇಟ್ಟಿದ್ದಾರೆ.

ಶ್ರೀ ಟಿ. ಹನುಮಯ್ಯ.—ಆ ರೀತಿ ಡೇಟ್‌ಗ್ರೋವ್ ರಿಜರ್ವ್ ಮಾಡಲಿಕ್ಕೆ ಸರ್ಕಾರದವರ ಉದ್ದೇಶವೇನು, ಸ್ವಾಮಿ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಭಾಗದಲ್ಲಾದರೂ ಮರಗಳು ಇರಬೇಕು, ವಾತಾವರಣ ತಂಪಾಗಿರಬೇಕು ಎಂಬ ಉದ್ದೇಶದಿಂದ ರಿಜರ್ವ್ ಮಾಡಿದ್ದಾರೆ.

ಶ್ರೀ ಟಿ. ಹನುಮಯ್ಯ.—ಈ ಜಮೀನು ಕೊಡುವ ದರಲ್ಲಿ ನಿಮ್ಮ ವರ್ಗದವರಿಗೆ ಕಡಮೆ ಜಮೀನು ಎಂದರೆ ½ ಎಕರೆ 1 ಎಕರೆ ಕೊಡುತ್ತಾಯಿರುವುದು, ಬೇರೆಯವರಿಗೆ ಜಾಸ್ತಿ ಜಮೀನು ಕೊಡುತ್ತಾಯಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಿಮ್ಮ ವರ್ಗದವರಿಗೆ ಕಡಮೆ ಕೊಟ್ಟಿದ್ದರೆ ಅದೇ ರೀತಿ ಬಾಕಿಯವರಿಗೂ ಕೊಟ್ಟಿದ್ದಾರೆ.

ಶ್ರೀ ಟಿ. ಹನುಮಯ್ಯ.—ಯಾವಾಗ ಅರ್ಜಿ ಬಂದರೂ ಡಿಪ್ರೆಸ್ಡ್ ಕ್ಲಾಸ್ ಅಪ್ಲಿಕೇಷನ್ ಎಂದು ಹೇಳಿ ½ ಎಕರೆ, 1 ಎಕರೆ, 2 ಎಕರೆ ಮಾತ್ರ ಕೊಟ್ಟು ಅದೇ

ಕ್ಯಾನ್ಸ್ ಹಿಂದೂಗಳ ಅಪ್ಲಿಕೇಷ್ ಆದರೆ 10 ಎಕರೆ, 20 ಎಕರೆ, 50 ಎಕರೆಯವರೆಗೂ ಕೊಡುತ್ತಾಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಸರ್ಕಾರದವರ ಗಮನಕ್ಕೆ ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ಈ ತರಹ ಜಮೀನು ಇಲ್ಲದೇ ಇರತಕ್ಕವರಿಗೆ ಕಡಮೆ ಜಮೀನು ಕೊಟ್ಟು, ಜಮೀನಿದ್ದವರಿಗೇ ಹೆಚ್ಚು ಜಮೀನು ಕೊಡುತ್ತಾಯಿರುವುದು ಅನ್ಯಾಯ ಎಂದು ಸರ್ಕಾರದವರು ಒಪ್ಪಿಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನಿಲ್ಲದವರಿಗೇ ಜಮೀನು ಕೊಡಬೇಕೆಂದು ಲ್ಯಾಂಡ್ ರೆವೆನ್ಯೂ ನಿಬಂಧನೆಯನ್ನು ಕೂಡ ಬದಲಾಯಿಸಿದೆ. ಅದಕ್ಕಿಂತ ಹೆಚ್ಚು ಹೇಳುವುದಕ್ಕಾಗುವುದಿಲ್ಲ.

Agitation in respect of land granted to Sri V. Nanjappa

Q.—287. **Sri N. C. NAGAIAH REDDY** (Goribidnur).—

Will the Government be pleased to state:—

(*a*) whether there is agitation by the dispossessed raiyats of Mattedoddi village, Ramanagaram Taluk, that the lands granted to Sri V. Nanjappa, brother of the Chief Minister, should be restored to them;

(*b*) the steps they have taken in this behalf?

A.—**Sri Kadidal MANJAPPA** (Minister for Revenue and Public Works).—

(*a*) As per Government Order dated the 20th March 1952, Sri V. Nanjappa had been granted 50 acres of land out of Atchalu State Forest. It is reported that no ryot who had any right to be in possession has been dispossessed. Therefore, the question of restoration does not arise.

(*b*) The Government cannot take any step unless the grantee surrenders the land to Government for disposal.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ನಂಜಪ್ಪನವರಿಗೆ ಈ ಜಮೀನು ಗ್ರಾಂಟ್ ಮಾಡಿದ ಕಾಲದಲ್ಲಿ ರೈತರು 50 ಎಕರೆಯನ್ನು ಸಾಗುಮಾಡುತ್ತಾಯಿದ್ದರಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಬಂದಿರುವ ವರದಿ ಪ್ರಕಾರ ಈ 50 ಎಕರೆ ಪೈಕಿ 14 ಎಕರೆಯನ್ನು 1952 ನೇ ಮಾರ್ಚಿ ಆಖೈರಿನವರೆಗೂ ಗೇಣಿ ಕರಾರಿಗನು ಸಾರವಾಗಿ ಸಾಗುವಳಿ ಮಾಡುತ್ತಾಯಿದ್ದರು.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಈ 50 ಎಕರೆ ಜಮೀನೂ ಸಾಗುವಳಿಯಾಗುತ್ತಿತ್ತೆ, ಇಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಹುಭಾಗ ಸಾಗುವಳಿಯಾಗುತ್ತಿತ್ತು. ಕೆಲವರು ಗೇಣಿ ಮೇರೆ ಮಾಡುತ್ತಿದ್ದರು. ಬಾಕಿಯವರು ಎಲ್ಲರೂ ಕೂಡ unauthorised cultivators.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಈ ಜಮೀನನ್ನು ಇವರಿಗೆ ಗ್ರಾಂಟ್ ಮಾಡಿದ ಕಾಲದಲ್ಲಿ ಆದು ರೈತರ ವಶದಲ್ಲಿತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ವಶದಲ್ಲಿತ್ತು. ಆದರೂ ಕೆಲವು ಭಾಗವನ್ನು ಒಂದು ವರ್ಷದ ಗೇಣಿ ಸಾಗುವಳಿ ಕರಾರಿನ ಮೇರೆ ಸಾಗುವಳಿ ಮಾಡುತ್ತಿದ್ದರು. ಇನ್ನು ಕೆಲವು ಭಾಗ unauthorised ಆಗಿ ಸಾಗುವಳಿಯಾಗುತ್ತಿತ್ತು.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಜಮೀನನ್ನು ಗ್ರಾಂಟು ಮಾಡಿದ ಕಾಲದಲ್ಲಿ ಶ್ರೀ ನಂಜಪ್ಪನವರು ಸರ್ಕಾರಿ ನೌಕರಿಯಲ್ಲಿದ್ದರೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಶ್ರೀ ವಿ. ನಂಜಪ್ಪನವರು ಜಮೀನು ಗ್ರಾಂಟಾದ ಕಾಲದಲ್ಲಿ ಸರ್ಕಾರಿ ನೌಕರಿಯಲ್ಲಿದ್ದರೆಂದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಿಲ್ಲ; ಆಗಿನ ಕಾಲದಲ್ಲಿದ್ದರೇ ಎಂಬುದನ್ನು ಹೇಳಲಾರೆ.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಆಗ ನಸ್ಪೆಕ್ಷನ್‌ನಲ್ಲಿದ್ದರೇ ಎಂದು ಪ್ರಶ್ನೆ ಕೇಳಿದ್ದಕ್ಕೆ 'ಹೌದು' ಎಂದು ತಿಳಿಸಿದ್ದೀರಲ್ಲಾ ?

Sri Kadidal MANJAPPA.—It seems he had tendered resignation.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಆದು accept ಆಗದೆ ಈಗಲೂ ಅವರು ಸರ್ಕಾರಿ ನೌಕರಿಯಲ್ಲಿದಾರೆಂದರೆ ಒಪ್ಪುತ್ತೀರಾ ?

Sri Kadidal MANJAPPA.—I want notice, I cannot give a definite reply.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಹೀಗೆ ಸರ್ಕಾರಿ ನೌಕರಿಯಲ್ಲಿರುವವರಿಗೆ ಜಮೀನನ್ನು ಕೊಡುವುದು ಮೈನೂರು ಸರ್ವಿಸ್ ರೆಗ್ಯುಲೇಷನ್ನಿಗೆ ವಿರುದ್ಧವಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ಸರ್ಕಾರಿ ನೌಕರಿಯಲ್ಲದ್ದಾರೆಂದು ಒಪ್ಪಿಕೊಂಡಿದ್ದರೆ ತಾನೆ ಆ ಪ್ರಶ್ನೆ ಬರುತ್ತದೆ. ನನಗೆ ತಿಳಿದಿರುವ ಮಟ್ಟಿಗೆ ಅವರು ರಾಜಿನಾಮೆ ಕೊಟ್ಟಿದ್ದರೆಂದು ತಿಳಿದುಬಂದಿದೆ.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಅವರ ಮೇಲೆ ದುಡ್ಡು ತಿಂದರು ಎಂದು ಕೇಸುಹಾಕಿದ್ದು ಯಾಕೆ?

Mr. SPEAKER.—That does not arise out of this.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ಹೀಗೆ ಒಮ್ಮೆ ಜಮೀನನ್ನು ಗ್ರಾಂಟ್ ಮಾಡಿದ ಮೇಲೆ, ಆ ಜನಗಳಿಂದ ಜಮೀನುಗಳನ್ನು ಪುನಃ ಸರ್ಕಾರದವರು ವಾಪಸು ತೆಗೆದುಕೊಂಡು ಅದನ್ನು ಪುನಃ dispose ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೈಕೋರ್ಟಿನ ತೀರ್ಮಾನ ಇತ್ತೀಚೆಗೆ ಒಂದು ಆಗಿದೆ. ಅದಕ್ಕಿಂತ ಹಿಂದೆಯೂ ಕೆಲವು ಸಂದರ್ಭಗಳಲ್ಲಿ ಒಮ್ಮೆ ಗ್ರಾಂಟ್' ಮಾಡಿದ ಜಮೀನನ್ನು ವಾಪಸು ತೆಗೆದುಕೊಂಡಿರುವುದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಎ. ಸಿ. ನಾಗಯ್ಯರೆಡ್ಡಿ.—ತಾವೇ ಹಿಂದೊಮ್ಮೆ ಲಂಚ ನಿರೋಧ ಇಲಾಖೆಯಿಂದ ಇವರ ವಿಷಯದಲ್ಲಿ ಒಂದು ತನಿಖೆ ಆಗುತ್ತಿದೆಯೆಂದು ಹೇಳಿರಲಿಲ್ಲವೇ?

Mr. SPEAKER.—It does not arise out of this.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅಲ್ಲಿನ ರೈತರುಗಳು ಎಷ್ಟು ವರ್ಷಗಳಿಂದ ಆ ಜಮೀನನ್ನು ಸಾಗುವಳಿ ಮಾಡುತ್ತಿದ್ದರು ?